01

ಕರ್ನಾಟಕ ವಿಧಾನ ಸಭೆ

(15ನೇ ವಿಧಾನಸಭೆ, 1ನೇ ಅಧಿವೇಶನ)

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 59
2) ಸದಸ್ಯರ ಹೆಸರು : ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ)
3) ಉತ್ತರಿಸುವ ದಿನಾಂಕ : 09-07-2018
4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಕಾಡ್ಗಿಚ್ಚಿನಿಂದ ಉಂಟಾಗಿರುವ ಹಾನಿ ಮತ್ತು ನಷ್ಟಗಳೇನು;</td><td>ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ಉಂಟಾಗಿರುವ ಅರಣ್ಯ ಬೆಂಕಿ ಪ್ರಕರಣಗಳು ಬಹುತೇಕ ನೆಲಮಟ್ಟದ ಬೆಂಕಿ ಪ್ರಕರಣಗಳಾಗಿದ್ದು, ಹೆಚ್ಚಿನ ಹಾನಿ ಸಂಭವಿಸಿರುವುದಿಲ್ಲ. ಕಳೆದ 3 ವರ್ಷಗಳಲ್ಲಿ ಸಂಭವಿಸಿದ ಬೆಂಕಿ ಪ್ರಕರಣಗಳು ಹಾಗೂ ಹಾನಿಗೊಳಗಾದ ಪ್ರದೇಶಗಳ ವಿವರ ಕೆಳಕಂಡಂತಿದೆ.
<table>
<tr><th></th><th>2015</th><th>2016</th><th>2017</th></tr>
<tr><td>ಸಂಭವಿಸಿದ ಬೆಂಕಿ ಪ್ರಕರಣಗಳ ಸಂಖ್ಯೆ</td><td>589</td><td>913</td><td>925</td></tr>
<tr><td>ಹಾನಿಗೊಳಗಾದ ಅರಣ್ಯ ಪ್ರದೇಶ (ಹೆಕ್ಟೇರ್‌ಗಳಲ್ಲಿ)</td><td>168.67</td><td>278.68</td><td>6976.85</td></tr>
</table>
ಮುಂದುವರೆದು, ಕಳೆದ 3 ವರ್ಷಗಳಲ್ಲಿ ರಕ್ಷಿತಾರಣ್ಯ ಪ್ರದೇಶಗಳಲ್ಲಿ ಒಣಗಿದ ಹುಲ್ಲು ಮತ್ತು ಒಣಗಿ ಬಿದ್ದಿರುವ ಕೆಲವೊಂದು ಮರಗಳು ಸುಟ್ಟಿದ್ದು, ವನ್ಯಪ್ರಾಣಿಗಳ ಪ್ರಾಣಹಾನಿಯಾಗಿರುವ ಬಗ್ಗೆ ವರದಿಯಾಗಿರುವುದಿಲ್ಲ. ಆದರೆ ಸದರಿ ಪ್ರದೇಶದಲ್ಲಿದ್ದ ಸರೀಸೃಪಗಳಾದ ಉರಗ ಸಂತತಿ, ಮೊಟ್ಟೆಗಳು ಮತ್ತು ಸಣ್ಣಪ್ರಾಣಿ/ಪಕ್ಷಿಗಳು, ಹುಳ/ಕೀಟ ಮುಂತಾದವುಗಳಿಗೆ ಹಾನಿ ಉಂಟಾಗಿರುವ ಸಾಧ್ಯತೆ ಇರುತ್ತದೆ.

2016-17ನೇ ಸಾಲಿನಲ್ಲಿ ದಿನಾಂಕ: 18-02-2017 ರಂದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಲ್ಕೆರೆ ಅರಣ್ಯ ಪ್ರದೇಶದಲ್ಲಿ ಶ್ರೀ ಮುರುಗೆಪ್ಪ ತಮ್ಮಣ್ಣಗೋಳ, ಎಂಬುವ ಅರಣ್ಯ ರಕ್ಷಕರು ಬೆಂಕಿ ಅವಘಡಕ್ಕೆ ಸಿಲುಕಿ ಹುತಾತ್ಮರಾಗಿರುತ್ತಾರೆ. ಅದೇ ಪ್ರದೇಶದಲ್ಲಿ ಬೆಂಕಿ ನಂದಿಸುವ ಕಾರ್ಯದಲ್ಲಿ ನಿರತರಾಗಿದ್ದ ಶ್ರೀ ಗಂಗಾಧರ, ವಲಯ ಅರಣ್ಯಾಧಿಕಾರಿ, ಮೊಳಿಯೂರು ವಲಯ, ಶ್ರೀ ಮಧು ಹಾಗೂ ಮಂಜು, ತಾತ್ಕಾಲಿಕ ಬೆಂಕಿ ವಾಚರ್‌ಗಳು ಬೆಂಕಿಯ ತೀವ್ರತೆಗೆ ಗಾಯಗೊಂಡಿದ್ದರಿಂದ ಸದರಿಯವರನ್ನು ಆಸ್ಪತ್ರೆಗೆ ಚಿಕಿತ್ಸೆಕೊಡಿಸಲು ದಾಖಲು ಮಾಡಲಾಗಿದ್ದು, ಸದರಿ ಸಿಬ್ಬಂದಿಗಳು ಚಿಕಿತ್ಸೆಯಿಂದ ಚೇತರಿಸಿಕೊಂಡಿರುತ್ತಾರೆ.</td></tr>
<tr><td>ಆ)</td><td>ಕಾಡ್ಗಿಚ್ಚಿನಿಂದ ಅರಣ್ಯ ಮತ್ತು ವನ್ಯ ಜೀವಿಗಳನ್ನು ರಕ್ಷಿಸಲು ಸರ್ಕಾರ ತೆಗೆದುಕೊಂಡಿರುವ ಮುನ್ನೆಚ್ಚರಿಕೆ ಕ್ರಮಗಳೇನು;</td><td>ಕಾಡ್ಗಿಚ್ಚಿನಿಂದ ಅರಣ್ಯ ಮತ್ತು ವನ್ಯಜೀವಿಗಳನ್ನು ರಕ್ಷಿಸಲು ಕೆಳಗಿನಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.
1. ಅರಣ್ಯ ಪ್ರದೇಶದಲ್ಲಿ ಹೊಸದಾಗಿ ಬೆಂಕಿ ರೇಖೆಗಳ ನಿರ್ಮಾಣ, ಹಳೆಯ ಬೆಂಕಿ ರೇಖೆಗಳನ್ನು ಹಾಗೂ ಡಿ ಲೈನ್‌ಗಳನ್ನು ನಿರ್ವಹಣೆ ಮಾಡಲಾಗುತ್ತಿದೆ.
2. ಅರಣ್ಯ ಇಲಾಖೆಯಲ್ಲಿ ಶುಲ್ಕರಹಿತ ಅರಣ್ಯ ಸಹಾಯವಾಣಿ 1926 ದಿನದ 24 ಗಂಟೆಯೂ ಕಾರ್ಯನಿರತವಾಗಿದ್ದು, ಸಾರ್ವಜನಿಕರಿಂದ ಅರಣ್ಯ ಬೆಂಕಿ ಪ್ರಕರಣಗಳ ಬಗ್ಗೆ ಮಾಹಿತಿ ಸ್ವೀಕೃತವಾದಲ್ಲಿ ಸಂಬಂಧಿಸಿದ ಕ್ಷೇತ್ರಧಿಕಾರಿಗಳಿಗೆ ಮಾಹಿತಿಯನ್ನು ಸಕಾಲದಲ್ಲಿ ರವಾನಿಸಿ ಅರಣ್ಯ ಬೆಂಕಿಯನ್ನು ನಿಯಂತ್ರಿಸುವಲ್ಲಿ ತುರ್ತು ಕ್ರಮ ಕೈಗೊಳ್ಳಲಾಗುತ್ತದೆ.
3. ಅರಣ್ಯ ಹಾಗೂ ವನ್ಯಪ್ರಾಣಿ ಸಂಪತ್ತನ್ನು ಕಾಡ್ಗಿಚ್ಚಿನಿಂದ ರಕ್ಷಿಸಲು ಅರಣ್ಯ ಪ್ರದೇಶಕ್ಕೆ ಬೆಂಕಿ ಇಡದಂತೆ ಹಳ್ಳಿಯ ಜನರಲ್ಲಿ ಅರಿವು ಮೂಡಿಸುವ ಸಂಬಂಧ</td></tr>
</table>

ಕರಪತ್ರಗಳನ್ನು ಮುದ್ರಿಸಿ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಗ್ರಾಮಗಳಲ್ಲಿ ವಿತರಿಸಲಾಗುತ್ತಿದೆ.

4. ಸ್ಯಾಟಲೈಟ್ ಮೂಲಕ ಪ್ರಾಪ್ತವಾಗುವ ಮಾಹಿತಿ ಮೇರೆಗೆ ಸಂಬಂಧಪಟ್ಟ ವಿಭಾಗಗಳಿಗೆ ಫೈರ್ ಅಲರ್ಟ್ ಮಾಹಿತಿಯನ್ನು ಕೇಂದ್ರ ಸ್ಥಾನದಲ್ಲಿರುವ ಐ.ಸಿ.ಟಿ. ಯಿಂದ ಮಾಹಿತಿ ಕಳುಹಿಸಿ ತುರ್ತು ಕ್ರಮ ಕೈಗೊಳ್ಳಲಾಗುತ್ತಿದೆ.
5. ಅರಣ್ಯದಂಚಿನ ಗ್ರಾಮಗಳಲ್ಲಿ ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಿ, ಸಮಿತಿಯ ಮುಖಾಂತರ ಗ್ರಾಮಸ್ಥರಿಗೆ ಅರಣ್ಯ ಬೆಂಕಿ ಅವಘಡದ ಬಗ್ಗೆ ಅರಿವು ಮೂಡಿಸಿ, ಗ್ರಾಮಸ್ಥರ ಸಹಯೋಗದೊಂದಿಗೆ ಬೆಂಕಿ ನಂದಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.
6. ಅರಣ್ಯ ಪ್ರದೇಶಗಳಲ್ಲಿ ಬೆಂಕಿಯನ್ನು ನಂದಿಸಲು ಇಲಾಖಾ ಸಿಬ್ಬಂದಿಯೊಂದಿಗೆ ಸ್ಥಳೀಯ ಗ್ರಾಮಸ್ಥರ ಹಾಗೂ ಬುಡಕಟ್ಟು ಜನಾಂಗದವರ ಸಹಯೋಗವನ್ನು ಪಡೆಯಲಾಗುತ್ತಿದೆ. ಬೆಂಕಿ ಕಾವಲು ಶಿಬಿರಗಳನ್ನು ನಿರ್ಮಿಸಿ ಕಾಡ್ಗಿಚ್ಚಿನಿಂದ ಅರಣ್ಯ ಪ್ರದೇಶಗಳನ್ನು ಮತ್ತು ವನ್ಯಜೀವಿಗಳನ್ನು ರಕ್ಷಿಸಲು ಬೆಂಕಿ ಕಾವಲುಗಾರರನ್ನು ಪ್ರತಿ ವರ್ಷ ಬೇಸಿಗೆ ಕಾಲದಲ್ಲಿ ನೇಮಿಸಿಕೊಳ್ಳಲಾಗುತ್ತಿದೆ.
7. ಅರಣ್ಯ ಪ್ರದೇಶಗಳಲ್ಲಿ ಬೆಂಕಿ ನಿಯಂತ್ರಿಸಲು ಆಧುನಿಕ ಉಪಕರಣಗಳನ್ನು, ಶಿರಸ್ತ್ರಾಣ, ಸಮವಸ್ತ್ರಗಳನ್ನು ಬೆಂಕಿ ಕಾವಲುಗಾರರಿಗೆ ಹಾಗೂ ಬೆಂಕಿ ಸಂರಕ್ಷಣಾ ಪಡೆಗಳಿಗೆ ಒದಗಿಸಲಾಗಿರುತ್ತದೆ.
8. ಸತತವಾಗಿ ಕಳೆದ ಮೂರು ವರ್ಷಗಳಿಂದ ಮಳೆ ಕಡಿಮೆಯಾಗಿದ್ದು, ಶುಷ್ಕ ವಾತಾವರಣ ಉಂಟಾಗಿರುವುದರಿಂದ ರಕ್ಷಿತ ಪ್ರದೇಶಗಳು, ಅದರಲ್ಲೂ ಹುಲಿ ಸಂರಕ್ಷಿತ ಪ್ರದೇಶಗಳಿಗೆ ಹೆಚ್ಚಿನ ನಿಗಾ ಇಡಲು ಅಗ್ನಿಶಾಮಕದಳದ ಉನ್ನತ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ಬಂಡೀಪುರ ಮತ್ತು ನಾಗರಹೊಳೆಗೆ ಒಂದೊಂದು ಅಗ್ನಿಶಾಮಕ ವಾಹನ ಮತ್ತು ಬಿ.ಆರ್.ಟಿ.ಗೆ ಕ್ವಿಕ್ ರೆಸ್ಪಾನ್ಸ್ ವಾಹನವನ್ನು ನಿಯೋಜಿಸಲಾಗಿದೆ.
9. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಹಾಗೂ ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನದಲ್ಲಿನ ಬಹುಪಾಲು ಭಾಗ ಉಷ್ಣವಲಯದ ಎಲೆಯುದುರುವ ಅರಣ್ಯದಿಂದ ಕೂಡಿರುವುದರಿಂದ ಬೇಸಿಗೆಯ ಕಾಲದಲ್ಲಿ ಅರಣ್ಯ ಪ್ರದೇಶಕ್ಕೆ ಬೆಂಕಿ ಬೀಳುವ ಸಂದರ್ಭಗಳು ಹೆಚ್ಚಾಗಿರುತ್ತವೆ. ಆದರೆ, ಬೆಂಕಿ ಬಿದ್ದ ಸಂದರ್ಭದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅರಣ್ಯ ಪ್ರದೇಶಕ್ಕೆ ಬೆಂಕಿ ಹರಡುವುದನ್ನು ತಡೆಗಟ್ಟುವುದಕ್ಕಾಗಿ ಸಮರೋಪಾದಿಯಲ್ಲಿ ಸಿಬ್ಬಂದಿಗಳು ಹಾಗೂ ಬೆಂಕಿ ವಾಚರ್‌ಗಳು ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿಸಿಕೊಂಡು ಬೆಂಕಿಯನ್ನು ನಿಯಂತ್ರಿಸುವುದಕ್ಕೆ ಸಂಬಂಧಿಸಿದಂತೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
10. 2017-18ನೇ ಸಾಲಿನಿಂದ ಬೇಸಿಗೆ ಕಾಲದಲ್ಲಿ ಬೆಂಕಿ ರಕ್ಷಣಾ ಕಾರ್ಯ ನಿರ್ವಹಿಸಲು ಕೆಲವು ರಕ್ಷಿತ ಅರಣ್ಯ ಪ್ರದೇಶಗಳಲ್ಲಿ ಅಗ್ನಿಶಾಮಕ ಇಲಾಖೆಯ ಸಿಬ್ಬಂದಿ, ಅಗ್ನಿಶಾಮಕ ವಾಹನಗಳನ್ನು ನಿಯೋಜಿಸಿ ಬೆಂಕಿ ನಿಯಂತ್ರಿಸುವ ಉಪಕರಣಗಳನ್ನು ಬಳಸಿಕೊಂಡು ಕಾಡ್ಗಿಚ್ಚು ನಿಯಂತ್ರಣ ಕಾರ್ಯವನ್ನು ಕೈಗೊಳ್ಳಲಾಗಿದೆ. ಅಗ್ನಿಶಾಮಕ ವಾಹನಗಳ ಇಂಧನ ವೆಚ್ಚಕ್ಕಾಗಿ ಇಲಾಖಾ ವತಿಯಿಂದ ರೂ.38.00ಲಕ್ಷ ಮೊತ್ತವನ್ನು ಅಗ್ನಿಶಾಮಕ ಇಲಾಖೆಗೆ ಪಾವತಿಸಲಾಗಿದೆ.
11. ಅವಶ್ಯವಿದ್ದ ಸಂದರ್ಭಗಳಲ್ಲಿ ಅಗ್ನಿಶಾಮಕದಳದ ನೆರವನ್ನೂ ಸಹ ಪಡೆದುಕೊಂಡು ಅರಣ್ಯ ಬೆಂಕಿಗಳನ್ನು ಸಮರ್ಪಕವಾಗಿ ನಿಯಂತ್ರಿಸಿ ಶಮನಗೊಳಿಸಲಾಗುತ್ತದೆ.

12.ಉದ್ದೇಶಪೂರ್ವಕವಾಗಿ ಕಾಡಿಗೆ ಬೆಂಕಿ ಇಡುವಂತಹ ದುಷ್ಕರ್ಮಿಗಳ ವಿರುದ್ಧ ಎಫ್.ಐ.ಆರ್. ದಾಖಲಿಸಿ, ಪೋಲೀಸ್ ಠಾಣೆಯಲ್ಲಿಯೂ ಸಹ ಮೊಕದ್ದಮೆ ದಾಖಲು ಮಾಡಲಾಗುವುದು.

ಇ) ಕಳೆದ 3 ವರ್ಷಗಳಲ್ಲಿ ರಾಜ್ಯ ವ್ಯಾಪ್ತಿ ಅರಣ್ಯದಂಚಿನಲ್ಲಿ ವಾಸವಿರುವ ರೈತರಿಗೆ ಕಾಡು ಪ್ರಾಣಿಗಳಿಂದ ಉಂಟಾಗಿರುವ ಬೆಳೆ ನಷ್ಟವೆಷ್ಟು ; ಈ ರೈತರಿಗೆ ಸರ್ಕಾರದಿಂದ ಪರಿಹಾರ ವಿತರಿಸುವ ಬಗ್ಗೆ ಕೈಗೊಂಡ ಕ್ರಮಗಳೇನು;

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಬೆಳೆಹಾನಿ ಪ್ರಕರಣಗಳು ಹಾಗೂ ದಯಾತ್ಮಕ ಧನ ಪಾವತಿಸಿದ ವಿವರ ಈ ಕೆಳಕಂಡಂತಿದೆ.

(ಮೊತ್ತ ರೂ. ಗಳಲ್ಲಿ)

ವಿಭಾಗ / ಜಿಲ್ಲೆ	2015-16		2016-17		2017-18	
	ಬೆಳೆ ಹಾನಿ	ಮೊತ್ತ	ಬೆಳೆ ಹಾನಿ	ಮೊತ್ತ	ಬೆಳೆ ಹಾನಿ	ಮೊತ್ತ
ರಾಮನಗರ	1697	4,481,981.00	961	3,177,660.00	2471	11,520,777.00
ಬೆಂಗಳೂರು ನಗರ	69	186,670.00	47	189,582.00	29	230,000.00
ಬೆಂಗಳೂರು ಗ್ರಾಮಾಂತರ	502	2,410,595.00	409	2,215,000.00	543	4,840,844.00
ಬನ್ನೇರುಘಟ್ಟ ರಾ.ಉ	579	1,119,015.00	767	2,140,869.00	781	2,634,280.00
ಕೋಲಾರ	109	429,560.00	47	390,650.00	509	3,951,800.00
ಚಿಕ್ಕಬಳ್ಳಾಪುರ	0	–	0	–	17	147,000.00
ಬಾಗಲಕೋಟೆ	0	–	0	–	1	10,000.00
ಬೆಳಗಾವಿ	487	805,500.00	80	593,387.00	697	6,011,849.00
ಬಿಜಾಪುರ	2	12,000.00	0	–	0	–
ಗೋಕಾಕ್	0	–	0	–	1	20,000.00
ಬಳ್ಳಾರಿ	449	1,190,152.00	180	530,168.00	139	442,590.00
ಚಿತ್ರದುರ್ಗ	25	215,757.00	31	151,011.00	92	1,798,884.00
ದಾವಣಗೆರೆ	156	706,464.00	102	397,470.00	340	1,333,425.00
ಚಾಮರಾಜನಗರ	60	309,613.00	141	468,254.00	126	648,234.00
ಕಾವೇರಿ	302	1,123,386.00	487	2,287,606.00	1240	5,310,611.00
ಮಲೈ ಮಹದೇಶ್ವರ	20	102,792.00	111	682,767.00	202	1,931,016.00
ಭದ್ರಾ	86	532,146.00	68	570,391.00	43	468,000.00
ಚಿಕ್ಕಮಗಳೂರು	722	4,334,235.00	919	6,085,114.00	1759	10,559,059.00
ಕೊಪ್ಪ	126	658,286.00	101	869,995.00	144	1,195,850.00
ಧಾರವಾಡ	110	723,351.00	23	261,000.00	157	992,000.00
ಗದಗ	204	307,151.00	944	1,385,106.00	1330	2,265,000.00
ಹಾವೇರಿ	706	467,342.00	2424	2,034,394.00	537	1,105,000.00
ರಾಣೇಬೆನ್ನೂರು	243	578,032.00	730	3,585,081.00	1052	3,850,000.00
ಬಂಡೀಪುರ	2927	6,122,388.00	2416	6,787,489.00	1542	4,587,594.00
ನಾಗರಹೊಳೆ	735	2,502,982.00	693	3,181,267.00	447	2,518,000.00
ಬೀದರ್	216	557,552.00	40	100,610.00	234	1,082,000.00
ಕಲಬುರಗಿ	2	13,200.00	16	64,310.00	20	95,065.00
ಯಾದಗೀರಿ	0	–	0	–	50	179,000.00
ದಾಂಡೇಲಿ	50	136,728.00	85	421,416.00	71	371,878.00
ಹಳಿಯಾಳ	456	1,361,311.00	438	1,439,878.00	506	1,626,578.00
ಹೊನ್ನಾವರ	8	251,833.00	2	17,500.00	2	47,400.00
ಕಾರವಾರ	22	133,199.00	2	4,920.00	0	–
ಶಿರಸಿ	571	1,592,513.00	406	995,206.00	168	617,000.00
ಯಲ್ಲಾಪುರ	234	1,519,754.00	144	1,145,704.00	347	3,167,363.00
ಹಾಸನ	2223	8,691,013.00	1350	7,406,719.00	3018	15,171,939.00
ತುಮಕೂರು	1252	5,825,938.00	898	3,873,482.00	824	3,647,363.00
ಮಡಿಕೇರಿ	1212	5,267,463.00	1374	6,154,566.00	1492	7,384,156.00
ವಿರಾಜಪೇಟೆ	1307	6,050,622.00	994	4,147,564.00	1707	10,417,453.00
ಮಡಿಕೇರಿ ವಜೀ	491	1,510,290.00	405	1,480,027.00	615	2,845,248.00

ಕುದುರೆಮುಖ ವಜೀ	65	244,575.00	85	501,260.00	129	1,024,965.00
ಕುಂದಾಪುರ	380	1,893,105.00	147	678,853.00	461	2,215,495.00
ಮಂಗಳೂರು	106	979,801.00	80	786,640.00	76	1,010,074.00
ಹುಣಸೂರು	79	293,529.00	118	382,831.00	243	1,128,373.00
ಮಂಡ್ಯ	25	103,541.00	22	140,297.00	125	1,166,918.00
ಮೈಸೂರು	1293	2,800,124.00	170	688,100.00	1996	6,347,916.00
ಮೈಸೂರು ವಜೀ	0	-	0	-	16	86,820.00
ಭದ್ರಾವತಿ	96	418,520.00	148	1,222,979.00	754	7,384,635.00
ಸಾಗರ	103	511,330.00	29	159,780.00	54	537,548.00
ಶಿವಮೊಗ್ಗ	505	970,280.00	319	617,715.00	328	886,342.00
ಶಿವಮೊಗ್ಗ ವಜೀ	138	453,202.00	32	152,808.00	90	203,248.00
ಒಟ್ಟು	21150	70,898,821.00	18985	70,567,426.00	27525	137,016,590.00

ಈ)	ವನ್ಯ ಜೀವಿಗಳ ರಕ್ಷಣೆಗೆ ಸರ್ಕಾರವು ಬಳಸುತ್ತಿರುವ ವೈಜ್ಞಾನಿಕ ತಂತ್ರಜ್ಞಾನಗಳು ಯಾವುವು?	ವನ್ಯಜೀವಿಗಳ ರಕ್ಷಣೆಗಾಗಿ ಈ ಕೆಳಕಂಡ ವೈಜ್ಞಾನಿಕ ತಂತ್ರಜ್ಞಾನವನ್ನು ಅಳವಡಿಸಲಾಗಿರುತ್ತದೆ. 1. "ಹೆಜ್ಜೆ" (Hejje) ಸಾಫ್ಟ್‌ವೇರ್‌ನ ಉಪಯೋಗದಿಂದ ಇಲಾಖಾ ಸಿಬ್ಬಂದಿಗಳು ಕಾಡಿನಲ್ಲಿ ಗಸ್ತು ತಿರುಗಲು ಸಹಾಯಕವಾಗಿರುತ್ತದೆ. 2. ಕಾಲಕ್ರಮೇಣ ವನ್ಯಪ್ರಾಣಿಗಳ ಗಣತಿ ನಡೆಸಲು M-stripes ಮೊಬೈಲ್ ಆ್ಯಪ್ ಉಪಯೋಗಿಸಲಾಗುತ್ತಿದೆ. 3. ವನ್ಯಜೀವಿಗಳ ಇರುವಿಕೆಯ ಬಗ್ಗೆ ಸೂಚಿಸಲು ಸಾರ್ವಜನಿಕರಿಗೆ ಸೂಚನಾ ಫಲಕದ ಮೂಲಕ ಮಾಹಿತಿ ನೀಡುವುದರ ಜೊತೆಗೆ ಮೊಬೈಲ್ ಎಸ್.ಎಂ.ಎಸ್ ಸೇವೆ ಒದಗಿಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. 4. ವನ್ಯಪ್ರಾಣಿಗಳ (ಪ್ರಮುಖವಾಗಿ ಆನೆ) ಚಲನ-ವಲನಗಳ ಮೇಲೆ ನಿಗಾ ಇಡಲು ರೇಡಿಯೋ ಕಾಲರ್‌ಗಳನ್ನು ಅಳವಡಿಸಲಾಗಿದ್ದು, ಇದರಿಂದ ಮಾನವ-ಪ್ರಾಣಿ ಸಂಘರ್ಷವನ್ನು ತಡೆಗಟ್ಟಲು ಸಹಾಯಕವಾಗುತ್ತಿದೆ. 5. ಕಳ್ಳಬೇಟೆ ತಡೆ ಶಿಬಿರಗಳಿಗೆ ಹಾಗೂ Rapid Response Teams (RRT) ಗಳನ್ನು ಅಂದರೆ ಕಾಡಾನೆ ಹಿಮ್ಮೆಟ್ಟಿಸುವ ತಂಡಗಳಿಗೆ Wireless networking ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.

ಸಂಖ್ಯೆ: ಅಪಜೀ 110 ಎಫ್‌ಡಬ್ಲ್ಯೂಎಲ್ 2018

(ಆರ್. ಶಂಕರ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

(2)

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	69
ಸದಸ್ಯರ ಹೆಸರು	:	ಶ್ರೀ ಆರ್. ನರೇಂದ್ರ (ಹನೂರು)
ಉತ್ತರಿಸುವ ಸಚಿವರು	:	ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು
ಉತ್ತರಿಸುವ ದಿನಾಂಕ	:	09.07.2018

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕು ಕೇಂದ್ರವಾಗಿ ಘೋಷಣೆಯಾಗಿದ್ದು, ಎಲ್ಲಾ ಸರ್ಕಾರಿ ಕಛೇರಿಗಳು ಒಂದೇ ಕಡೆ ಕಾರ್ಯ ನಿರ್ವಹಿಸುವಂತೆ ಆಡಳಿತ ಕಛೇರಿ ಸಂಕೀರ್ಣ (ಮಿನಿ ವಿಧಾನಸೌಧ) ನಿರ್ಮಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಹನೂರು ಹೋಬಳಿ, ಹುಲ್ಲೇಪುರ ಗ್ರಾಮದ ಸ.ನಂ. 312/ಡಿ ರಲ್ಲಿ ವಿಸ್ತೀರ್ಣ 7.76 ಎಕರೆ ಮತ್ತು 312/ಇ ರಲ್ಲಿ 1.17 ಎಕರೆ ವಿಸ್ತೀರ್ಣ ಸೇರಿ ಒಟ್ಟು 8.93 ಎಕರೆ ಜಮೀನನ್ನು ಮಿನಿ ವಿಧಾನಸೌಧ ಮತ್ತು ಇತರೆ ಸರ್ಕಾರಿ ಕಟ್ಟಡಗಳ ಹಾಗೂ ಅಧಿಕಾರಿ ಮತ್ತು ಸಿಬ್ಬಂದಿಗಳ ವಸತಿ ಗೃಹಗಳಿಗಾಗಿ ಕಾಯ್ದಿರಿಸಲಾಗಿದೆ. ಮಿನಿ ವಿಧಾನಸೌಧ ನಿರ್ಮಾಣ ಮಾಡುವ ಬಗ್ಗೆ ಸವಿವರ ಅಂದಾಜುಪಟ್ಟಿ ಮತ್ತು ನಕ್ಷೆಯೊಂದಿಗೆ ಸೂಕ್ತ ಪ್ರಸ್ತಾವನೆಯನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಂದ ಪಡೆದು ಮುಂದಿನ ಕ್ರಮವಹಿಸಲಾಗುವುದು.
ಆ)	ಹೊಸ ಮಿನಿ ವಿಧಾನಸೌಧ ನಿರ್ಮಾಣ ಆಗುವವರೆಗೂ ಸರ್ಕಾರಿ ಕಛೇರಿಗಳ ಕೆಲಸಕಾರ್ಯಗಳನ್ನು ನಡೆಸಲು ಮಾಡಿರುವ ಬದಲಿ ವ್ಯವಸ್ಥೆ ಏನು? (ವಿವರ ನೀಡುವುದು)	ಚಾಮರಾಜನಗರ ಜಿಲ್ಲೆಯ, ಹನೂರು ತಾಲ್ಲೂಕು ಕೇಂದ್ರವಾಗಿ ಘೋಷಣೆಯಾಗಿದ್ದು, ಹೊಸ ಮಿನಿ ವಿಧಾನಸೌಧ ನಿರ್ಮಾಣ ಆಗುವವರೆಗೂ, ಸಾರ್ವಜನಿಕರ ಕೆಲಸ ಕಾರ್ಯಗಳನ್ನು ಸುಗಮವಾಗಿ ನಿರ್ವಹಿಸಲು ಅನುವಾಗುವಂತೆ ತಾತ್ಕಾಲಿಕ ವ್ಯವಸ್ಥೆಯಾಗಿ, ವಿಶೇಷ ತಹಶೀಲ್ದಾರ್ ಕಛೇರಿ, ಹನೂರು ಇಲ್ಲಿ ತಾಲ್ಲೂಕು ಕಛೇರಿ ಕಾರ್ಯನಿರ್ವಹಿಸುತ್ತಿದ್ದು, ಉಳಿದ ಕೆಲವು ಇಲಾಖೆಗಳ ತಾಲ್ಲೂಕು ಮಟ್ಟದ ಕಛೇರಿಗಳು ಹಾಲಿ ಲಭ್ಯವಿರುವ ವಿವಿಧ ಸರ್ಕಾರಿ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇನ್ನುಳಿದ ಇಲಾಖೆಗಳ ಕಚೇರಿಗಳನ್ನು ಹಂತ ಹಂತವಾಗಿ ಕಾರ್ಯಾರಂಭಗೊಳಿಸಲು ಕ್ರಮವಹಿಸಲಾಗುತ್ತಿದೆ.

ಕಂಇ 36 ಡಬ್ಲ್ಯೂಬಿಆರ್ 2018

ಆರ್.ವಿ. ದೇಶಪಾಂಡೆ
ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಕರ್ನಾಟಕ ವಿಧಾನಸಭೆ

(3)

1	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	97
2	ಸದಸ್ಯರ ಹೆಸರು	ಶ್ರೀ ವಿ. ಸುನೀಲ್‌ಕುಮಾರ್ (ಕಾರ್ಕಳ)
3	ವಿಷಯ	ಹೊಸ ತಾಲ್ಲೂಕುಗಳ ಅಭಿವೃದ್ಧಿ
4	ಉತ್ತರಿಸಬೇಕಾದ ದಿನಾಂಕ	09.07.2018
5	ಉತ್ತರಿಸುವ ಸಚಿವರು	ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ಘೋಷಣೆ ಮಾಡಿದ ನಂತರದಲ್ಲಿ ತಾಲ್ಲೂಕುಗಳ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನವೆಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)	ಸರ್ಕಾರದ ಆದೇಶ ಸಂಖ್ಯೆ: ಕಂಇ 167 ಭೂದಾಪು 2017 ದಿನಾಂಕ: 28.12.2017 ಮತ್ತು ದಿನಾಂಕ: 07.03.2018 ರ ಅನ್ವಯ ಹೊಸದಾಗಿ ಘೋಷಿಸಲಾದ 50 ತಾಲ್ಲೂಕುಗಳಿಗೆ ಕಾರ್ಯಾರಂಭ ಮತ್ತು ಆಡಳಿತಾತ್ಮಕ ಪ್ರಕ್ರಿಯೆ ಪ್ರಾರಂಭಿಸಲು ತಲಾ ರೂ.10.00 ಲಕ್ಷಗಳ ಅನುದಾನವನ್ನು ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ.
ಆ)	ಘೋಷಿತ ತಾಲ್ಲೂಕುಗಳಲ್ಲಿ ಮಿನಿ ವಿಧಾನಸೌಧ ಸ್ಥಾಪಿಸುವ ಪ್ರಸ್ತಾವನೆ ಯಾವ ಹಂತದಲ್ಲಿದೆ;	ಹೊಸ ತಾಲ್ಲೂಕುಗಳಲ್ಲಿ ಕೆಲವು ಕಡೆ ಹೊಸ ಮಿನಿ ವಿಧಾನಸೌಧ ಕಟ್ಟಡ ಕಾಮಗಾರಿಗೆ ಸ್ಥಳ ಗುರುತಿಸಲಾಗಿದೆ. ಇನ್ನು ಕೆಲವು ಕಡೆ ಸ್ಥಳ ಗುರುತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಆದ್ದರಿಂದ ಜಿಲ್ಲಾ ಹಂತದಲ್ಲಿ ಸ್ಥಳ ಗುರುತಿಸಿ, ಅಂದಾಜು ಪಟ್ಟಿ ಮತ್ತು ನಕ್ಷೆಯೊಂದಿಗೆ ಪ್ರಸ್ತಾವನೆ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿದ ಕೂಡಲೇ ಅನುದಾನ ಲಭ್ಯತೆಯನ್ನಾಧರಿಸಿ ಹೊಸ ಮಿನಿ ವಿಧಾನಸೌಧ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.
ಇ)	ಹೆಬ್ರಿ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧ ಕಟ್ಟಡ ನಿರ್ಮಾಣ ಮಾಡಲು ಇಲಾಖೆಯಿಂದ ಸ್ಥಳ ಗುರುತಿಸಲಾಗಿದೆಯೇ; ಗುರುತಿಸಿದ್ದಲ್ಲಿ, ಎಲ್ಲಿ ಸ್ಥಳ ಗುರುತಿಸಲಾಗಿದೆ; (ವಿವರ ಒದಗಿಸುವುದು)	ಹೌದು, ನೂತನ ಹೆಬ್ರಿ ತಾಲೂಕು ಮಿನಿ ವಿಧಾನಸೌಧ ಕಟ್ಟಡ ನಿರ್ಮಾಣ ಮಾಡಲು ಚಾರಾ ಗ್ರಾಮದ ಸರ್ವೆ ನಂಬರ್ 153/3ಎ ರಲ್ಲಿ 11.15 ಎಕರೆ ಜಮೀನನ್ನು ಗುರುತಿಸಲಾಗಿದೆ.
ಈ)	ಉಡುಪಿ ಜಿಲ್ಲೆಯ ಹೆಬ್ರಿಯನ್ನು ತಾಲ್ಲೂಕನ್ನಾಗಿ ಘೋಷಿಸಿದ್ದು, ಗ್ರಾಮಗಳ ಸೇರ್ಪಡೆ ಹಾಗೂ ಸರ್ವೆ ಕಾರ್ಯ ಪ್ರಾರಂಭ ವಾಗಿದೆಯೇ; ಇಲ್ಲದಿದ್ದಲ್ಲಿ ವಿಳಂಬಕ್ಕೆ ಕಾರಣವೇನು?	ಹೆಬ್ರಿ ತಾಲ್ಲೂಕಿಗೆ ಕುಂದಾಪುರ ತಾಲ್ಲೂಕಿನ 4 ಗ್ರಾಮಗಳು ಹಾಗೂ ಕಾರ್ಕಳ ತಾಲ್ಲೂಕಿನ ಅಜೆಕಾರು ಹೋಬಳಿಯ 12 ಗ್ರಾಮಗಳು ಸೇರ್ಪಡೆಯಾಗಿ ಈಗಾಗಲೇ ತಾಲ್ಲೂಕು ರಚನೆಯಾಗಿದ್ದು, ತಾಲ್ಲೂಕು ಕಛೇರಿ ಕಾರ್ಯ ನಿರ್ವಹಿಸುತ್ತಿದೆ. ಭೂಮಿ ಹಾಗೂ ಅಟಲ್‌ಜೀ ಸೇವೆಗಳಿಗಾಗಿ ಮೂಲ ತಾಲ್ಲೂಕಿನಿಂದ ಗ್ರಾಮಗಳನ್ನು ಭೂಮಿ ಹಾಗೂ ಅಟಲ್‌ಜೀ ತಂತ್ರಾಂಶಗಳಿಗೆ ಮಾರ್ಕಿಂಗ್ ಮಾಡಲು ಕ್ರಮ ವಹಿಸಲಾಗುತ್ತಿದೆ.

ಕಂಇ 61 ಭೂದಾಪು 2018

ಆರ್.ವಿ.ದೇಶಪಾಂಡೆ
ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	89
2.	ಸದಸ್ಯರ ಹೆಸರು	:	ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ)
3.	ಉತ್ತರಿಸುವ ದಿನಾಂಕ	:	09.07.2018
4.	ಉತ್ತರಿಸುವ ಸಚಿವರು	:	ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಕ್ಕರೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ	Reply
ಅ.	ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕಿನಲ್ಲಿ ಉಚಿತವಾಗಿ ದೊರೆಯುವ ಸರ್ಕಾರಿ ಭೂಮಿಯಲ್ಲಿ ಬೃಹತ್ ಕೈಗಾರಿಕೆ ಸ್ಥಾಪನೆ ಮಾಡಿ ಅಭಿವೃದ್ಧಿ ಪಡಿಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ;	ಜಿಲ್ಲಾಧಿಕಾರಿ, ಹಾಸನ ಇವರ ಪತ್ರ ದಿನಾಂಕ 03.07.2018ರಲ್ಲಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1966 ರ ನಿಮಯ 3 ರನ್ವಯ ದಿನಾಂಕ: 01.07.2018ರಂದು ಪ್ರಕಟಿಸಲಾದ ಭೂ ಲಭ್ಯತಾ ಪಟ್ಟಿಯ ಅನುಸಾರ ಮಂಜೂರಾತಿಗೆ ಅರ್ಹವಿರುವ ಒತ್ತುವರಿಯಿಂದ ಮುಕ್ತವಾಗಿರುವ ಯಾವುದೇ ಸರ್ಕಾರಿ ಜಮೀನು ಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ. ಅರಸೀಕೆರೆಯಲ್ಲಿ ಬೃಹತ್ ಕೈಗಾರಿಕೆ ಸ್ಥಾಪಿಸಲು ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.	As per the land availability list published on 01.07.2018 under Karnataka Land Grant Rules 1966, Rule 3, there is no Government land available which is free from encroachment, as per the letter dated 03.07.2018 of Deputy Commissioner, Hassan. There is no proposal before the Government to establish any large industry in Arasikere.
ಆ.	ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?	ಉದ್ಭವಿಸುವುದಿಲ್ಲ.	Does not arise

ಸಂಖ್ಯೆ: ಸಿಐ 73 ಐಎಪಿ 2018

(ಕೆ.ಜೆ. ಜಾರ್ಜ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಕ್ಕರೆ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 72
2. ಮಾನ್ಯ ಸದಸ್ಯರ ಹೆಸರು : ಶ್ರೀ. ಸಿ.ಟಿ ರವಿ (ಚಿಕ್ಕಮಗಳೂರು)
3. ಉತ್ತರಿಸಬೇಕಾದ ದಿನಾಂಕ : 09-07-2018
4. ಉತ್ತರಿಸಬೇಕಾದವರು : ಮಾನ್ಯ ಕಾರ್ಮಿಕ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ	Replies
(ಅ)	ಚಿಕ್ಕಮಗಳೂರು ಜಿಲ್ಲೆಯಲ್ಲಿ ತೋಟ ಕಾರ್ಮಿಕರು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು	Yes
(ಆ)	ಬಂದಿದ್ದಲ್ಲಿ, ತೋಟ ಕಾರ್ಮಿಕರ ಅನುಕೂಲಕ್ಕಾಗಿ ಚಿಕ್ಕಮಗಳೂರು ಜಿಲ್ಲೆಯಲ್ಲಿ E.S.I ಆಸ್ಪತ್ರೆ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ, ಹಾಗಿದ್ದಲ್ಲಿ ಯಾವ ಹಂತದಲ್ಲಿದೆ (ವಿವರ ಒದಗಿಸುವುದು)	ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾರಾವಿ. ಆಸ್ಪತ್ರೆ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.	There is no proposal with the Government to commission ESI Hospital at Chikkamagaluru
(ಇ)	ಆಸ್ಪತ್ರೆ ಪ್ರಾರಂಭಿಸುವವರೆಗೆ E.S.I ಆಸ್ಪತ್ರೆ ಉಪ ಕೇಂದ್ರವನ್ನು ಪ್ರಾರಂಭಿಸಲು ಕ್ರಮ್ಮವಹಿಸಲಾಗುವುದೇ? (ವಿವರ ಒದಗಿಸುವುದು)	ಚಿಕ್ಕಮಗಳೂರು ಜಿಲ್ಲೆಯಲ್ಲಿ ಪೂರ್ಣ ಕಾಲಿಕ ಕಾರಾವಿ. ಚಿಕಿತ್ಸಾಲಯ ಪ್ರಾರಂಭಿಸಲು ಸರ್ಕಾರದ ಆದೇಶ ಸಂಖ್ಯೆ; ಕಾಇ 213 ಎಲ್‌ಎಸ್‌ಐ 2015 ದಿ: 26-10-16 ರಲ್ಲಿ ಮಂಜೂರಾತಿ ನೀಡಲಾಗಿರುತ್ತದೆ. ಚಿಕಿತ್ಸಾಲಯವನ್ನು ಪ್ರಾರಂಭಿಸಲು ಕಟ್ಟಡವನ್ನು ಗುರುತಿಸಲಾಗಿದ್ದು, ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದರಿಂದ ಚಿಕಿತ್ಸಾಲಯವನ್ನು ಪ್ರಾರಂಭಿಸುವ ಕಾರ್ಯವನ್ನು ಮುಂದೂಡಲಾಗಿದ್ದು, ಫಲಾನುಭವಿಗಳ ಹಿತದೃಷ್ಠಿಯಿಂದ ಶೀಘ್ರವಾಗಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.	The Government has accorded Sanction to open ESI Dispensary at Chikkamagaluru Vide G.O. No. LD 213 LSI 2015 Dt. 26-10-2016. The Department has identified the building to commission the Dispensary. It is delayed due to shortage of Staff. Action will be taken to open the Dispensary at the earliest in the interest of beneficiaries.

ಕಾಇ 139 ಎಲ್‌ಎಸ್‌ಐ 2018

(ವೆಂಕಟರಮಣಪ್ಪ)
ಕಾರ್ಮಿಕ ಸಚಿವರು

ಕರ್ನಾಟಕ ವಿಧಾನ ಸಭೆ

6

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	::	536
ಸದಸ್ಯರ ಹೆಸರು	::	ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ)
ಉತ್ತರಿಸುವ ದಿನಾಂಕ	::	09-07-2018
ಉತ್ತರಿಸುವ ಸಚಿವರು	::	ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಬಾಕಿ ಉಳಿದಿರುವ ಅಕ್ರಮ ಸಕ್ರಮ ಅರ್ಜಿಗಳ ಸಂಖ್ಯೆ ಎಷ್ಟು; ಎಷ್ಟು ವರ್ಷಗಳಿಂದ ಬಾಕಿ ಉಳಿದಿದೆ.	ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94ಎ ಅಡಿಯಲ್ಲಿ ನಮೂನೆ 50ರ ಯಾವುದೇ ಅರ್ಜಿಗಳು ಬಾಕಿ ಇರುವುದಿಲ್ಲ. ಹಾಗೆಯೇ ಕಲಂ 94ಬಿ ಅಡಿಯಲ್ಲಿ ನಮೂನೆ 53ರಲ್ಲಿ ಒಟ್ಟು 12209 ಅರ್ಜಿಗಳು ಸ್ವೀಕೃತಗೊಂಡಿದ್ದು, ಈ ಪೈಕಿ 368 ಅರ್ಜಿಗಳು ಇತ್ಯರ್ಥಪಡಿಸಲು 1999 ರಿಂದ ಬಾಕಿ ಇರುತ್ತವೆ.
ಆ)	ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಒಮ್ಮೆ ತಿರಸ್ಕರಿಸಲ್ಪಟ್ಟ ಅರ್ಜಿಗಳನ್ನು(ಅರ್ಹರಲ್ಲವೆಂದು) ಮತ್ತೆ ಸಭೆಯಲ್ಲಿ ಮಂಡಿಸಿ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಒಮ್ಮೆ ತಿರಸ್ಕರಿಸಲ್ಪಟ್ಟ ಅರ್ಜಿಗಳನ್ನು ಪುನಃ ಸಮಿತಿಯ ಮುಂದೆ ಮಂಡಿಸಲು ಅವಕಾಶವಿರುವುದಿಲ್ಲ. ಕಂದಿಕೆರೆ ಹೋಬಳಿ ಹುಲ್ಲೇನಹಳ್ಳಿ ಗ್ರಾಮದ ಸ.ನಂ.27ರ ಜಮೀನು ಮಂಜೂರಾತಿಗೆ ಸಂಬಂಧಿಸಿದ 8 ಅರ್ಜಿಗಳನ್ನು ದಿನಾಂಕ:13-09-1994 ರಂದು ಸಮಿತಿಯು ತಿರಸ್ಕರಿಸಿರುತ್ತದೆ. ಈ ಪೈಕಿ 3 ಅರ್ಜಿಗಳನ್ನು ದಿನಾಂಕ:23-06-2017 ರಂದು ಅನುಮೋದನೆಗಾಗಿ ಸಮಿತಿಯ ಮುಂದೆ ಪುನ: ಮಂಡಿಸಿ ಮಂಜೂರಾತಿಗಾಗಿ ಪರಿಗಣಿಸಲಾಗಿರುತ್ತದೆ. ತದನಂತರ ಈ 3 ಅನುಮೋದನೆಗಳನ್ನು ದಿನಾಂಕ:18-09-2017 ರಂದು ಸಮಿತಿಯು ವಜಾಗೊಳಿಸಿರುತ್ತದೆ.
ಇ)	ಹಾಗಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ಜರುಗಿಸಲಾಗುವುದು;	ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥ ಅಧಿಕಾರಿ ನೌಕರರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.
ಈ)	ಅಕ್ರಮ-ಸಕ್ರಮ ಸಮಿತಿ ರಚಿಸಲು ತಕ್ಷಣ ಕ್ರಮ ಕೈಗೊಳ್ಳಲಾಗುವುದೇ?	ನೂತನ ಸರ್ಕಾರವು ಅಸ್ಥಿತ್ವಕ್ಕೆ ಬಂದ ಹಿನ್ನೆಲೆಯಲ್ಲಿ ಆಯಾ ವಿಧಾನ ಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗಳನ್ನು ರಚಿಸಲು ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ: ಆರ್‌ಡಿ 72 ಎಲ್‌ಜಿಟಿ 2018

ಆರ್.ವಿ. ದೇಶಪಾಂಡೆ
ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

		ವಿಕಲಚೇತನ ಹಾಗೂ ಮಾಜಿ ಸೈನಿಕ ಉದ್ದಿಮೆದಾರರುಗಳಿಗೆ ನಿವೇಶನ ಮತ್ತು ಮಳಿಗೆಗಳ ಮೊತ್ತವನ್ನು 6 ಸಮ ತ್ರೈಮಾಸಿಕ ಕಂತುಗಳಲ್ಲಿ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ.	(Class-1 & Class-2a), differently abled and Ex-Servicemen.
ಇ)	ಸಣ್ಣ ಕೈಗಾರಿಕೆ ಸ್ಥಾಪನೆ ಮಾಡುವವರಿಗೆ ಶೇಕಡಾ 50ರ ರಿಯಾಯಿತಿ ದರದಲ್ಲಿ ನಿವೇಶನ ಮತ್ತು ಶೆಡ್‌ಗಳನ್ನು ನೀಡಲು ಸರ್ಕಾರಕ್ಕಿರುವ ತೊಂದರೆ ಏನು;	ಸರ್ಕಾರಿ ಆದೇಶದನ್ವಯ, ದಿನಾಂಕ 01.04.2016 ರಿಂದ ನಿಗಮದಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳಿಗೆ ಹಂಚಿಕೆ ಮಾಡಲಾಗುವ ಕೈಗಾರಿಕಾ ಮಳಿಗೆ/ಫ್ಲ್ಯಾಟ್/ಗೋದಾಮು/ ಅಂಗಡಿಗಳು ಹಾಗೂ ನಿವೇಶನಗಳಿಗೆ ಹಂಚಿಕೆ ಸಂದರ್ಭದಲ್ಲಿಯೇ ಮಳಿಗೆ/ನಿವೇಶನ ಮೌಲ್ಯದ ಶೇಕಡ 50ರಷ್ಟು ರಿಯಾಯಿತಿಯನ್ನು ನೀಡಲಾಗುತ್ತಿದೆ. ಇತರೆ ವರ್ಗದ ಉದ್ಯಮಶೀಲರಿಗೆ (ಸಾಮಾನ್ಯ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ, ಅಂಗವಿಕಲ, ಮಾಜಿಸೈನಿಕ, ಮಹಿಳೆ) ಕರ್ನಾಟಕ ಕೈಗಾರಿಕಾ ನೀತಿ 2014–19 ರನ್ವಯ ಕೈಗಾರಿಕಾ ವಲಯಗಳನ್ನು, ಕೈಗಾರಿಕಾ ವರ್ಗವನ್ನು ಮತ್ತು ಚಟುವಟಿಕೆಗಳನ್ನು ಆಧರಿಸಿ ಶೇ 10 ರಿಂದ ಶೇ 35 ರವರೆಗೆ ಬಂಡವಾಳ ಹೂಡಿಕೆ ಸಹಾಯಧನವನ್ನು ಭೂಮಿ, ಕಟ್ಟಡ ಮತ್ತು ಯಂತ್ರೋಪಕರಣಗಳ ಹೂಡಿಕೆಯ ಮೇಲೆ ನೀಡಲಾಗುತ್ತಿದೆ.	As per the Government Order, Allotment of Sheds/ Flats/ Godown/ Shops and Plot to the SC/ST entrepreneurs is being made at 50% concessional rates by the Corporation at the time of allotment itself w.e.f from 01.04.2016 and onwards. For other category of entrepreneurs (Gen, OBC, Min, PH, Ex-ser men, women) as the Karnataka Industrial Policy 2014-19 10% to 35% subsidy will be given based on the industrial zone, activity, category of the activity and investment made on land, building, plant and machinery.
ಈ)	ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?	ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳನ್ನು ಕ್ರಮ ಸಂ: (ಆ) ಮತ್ತು (ಇ) ರಲ್ಲಿ ವಿವರಿಸಿದೆ.	The action taken in this regard has been provided above at (b) and (c).

ಸಿಐ 62 ಸಿಎಸ್‌ಸಿ 2018

[ಎಸ್.ಆರ್. ಶ್ರೀನಿವಾಸ್ (ವಾಸು)]
ಸಣ್ಣ ಕೈಗಾರಿಕೆ ಸಚಿವರು

		ಅಭಿವೃದ್ಧಿಪಡಿಸುವ ಮಳಿಗೆ ಮತ್ತು ನಿವೇಶನಗಳ ಹಂಚಿಕೆ ಹಾಗೂ ಪ.ಜಾತಿ/ಪ.ಪಂಗಡದ / ಇತರೆ ವರ್ಗದ ಉದ್ದಿಮೆದಾರರುಗಳಿಗೆ ಕೆಳಕಂಡಂತೆ ಮೀಸಲಾತಿ ಕಲ್ಪಿಸಿದೆ; 1. ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡ – 22.50% 2. ಮಹಿಳಾ ಉದ್ಯಮಿಗಳು – 5.00% 3. ಅಲ್ಪಸಂಖ್ಯಾತರು, ವಿಕಲಚೇತನರು, ಹಿಂದುಳಿದ ವರ್ಗ (ವರ್ಗ–1 & 2ಎ), ಮಾಜಿ ಸೈನಿಕರು– 10.00% ➢ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ನಿಗಮದಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳಿಗೆ ಹಂಚಿಕೆ ಮಾಡಲ್ಪಡುವ ಮಳಿಗೆ/ ನಿವೇಶನಗಳಿಗೆ ಹಂಚಿಕೆ ಸಂದರ್ಭದಲ್ಲಿಯೇ ಅರ್ಹ ಶೇಕಡ 50ರಷ್ಟು ರಿಯಾಯಿತಿಯನ್ನು ನೀಡಲಾಗುತ್ತಿದೆ. ಹಂಚಿಕೆ ಪಡೆದ ಉದ್ದಿಮೆದಾರರಿಂದ ನಿವೇಶನ/ ಮಳಿಗೆಯ ಶೇಕಡಾ 25ರಷ್ಟು ಮೌಲ್ಯವನ್ನು ಮೊದಲು (Upfront) ನಿಗಮವು ಪಡೆದುಕೊಳ್ಳುತ್ತಿದ್ದು, ನಂತರ, ಉಳಿದ ಶೇಕಡಾ 25ರಷ್ಟು ನಿವೇಶನ / ಮಳಿಗೆಯ ಮೌಲ್ಯದ ಮೊತ್ತವನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ ವಾರ್ಷಿಕ ಶೇಕಡ 12.5%ರ ಬಡ್ಡಿ ದರದೊಂದಿಗೆ ವಸೂಲಾತಿ ಮಾಡಿಕೊಳ್ಳಲಾಗುತ್ತಿದೆ. ಹಾಗೂ ಚಳ್ಳಕೆರೆ, ಚಾಮರಾಜನಗರ, ಗೌರಿಬಿದನೂರು ಕೈಗಾರಿಕಾ ವಸಾಹತುಗಳಲ್ಲಿ ಸದರಿ ಯೋಜನೆಯಡಿ ನಿರ್ಮಿಸಿರುವ 'ಡಿ' ಮಾದರಿ ಮಳಿಗೆಗಳಿಗೆ ಶೇಕಡ 90ರಷ್ಟು ರಿಯಾಯಿತಿಯನ್ನೂ ನೀಡಲಾಗುತ್ತಿದೆ. ➢ ಅಲ್ಪಸಂಖ್ಯಾತ, ಹಿಂದುಳಿದ ವರ್ಗ (ವರ್ಗ–1 & ವರ್ಗ–2ಎ),	allotting Sheds & Plots developed by KSSIDC for SC/ ST/ Other category entrepreneurs: 1. Schedule Caste and Schedule Tribes - 22.50 % 2. Women Entrepreneurs- 5 % 3. Minorities, Differently abled, Backward Class (Category-1 & 2A), Ex-Servicemen - 10.00 % ➢ Allotment of Plots/Sheds to the SC/ST entrepreneurs under S.C.P and T.S.P is being made at 50% concessional rates. 25% of the cost of the cost of plot/shed will be collected upfront from the allottees. Thereafter, the remaining 25% of the cost of plots/ sheds will be recovered in 8 equal quarterly installments along with the interest at 12.5% p.a and 90% concession is also being given to 'D' type sheds constructed under the said scheme in Industrial Estates of the Challakere, Chamarajanagar and Gowribidanur. ➢ Provision has been made for the payment of cost of the plots and sheds in 6 equal quarterly installments to the entrepreneurs belonging to Backward

		ಪ್ರಮಾಣವನ್ನು (ಸೇಲಬಲ್ ಏರಿಯಾ) ಅಭಿಯಂತರರು, ನಕ್ಷೆಗನುಗುಣವಾಗಿ ಲೆಕ್ಕಾಚಾರ ಮಾಡಿ ನೀಡುವ ವಿಸ್ತೀರ್ಣವನ್ನು ಅನ್ವಯಿಸಲಾಗುವುದು. ಒಟ್ಟು ವೆಚ್ಚವನ್ನು ಜಮೀನಿನ ಸೇಲಬಲ್ ಏರಿಯಾಗೆ ಅನುಗುಣವಾಗಿ ಪ್ರೋರೇಟಾ ಆಧಾರದ ಮೇಲೆ ಲೆಕ್ಕಾಚಾರ ಮಾಡಿ ಪ್ರತಿ ಚ.ಮೀಗೆ ದರವನ್ನು ನಿಗದಿಪಡಿಸಲಾಗುವುದು ಮತ್ತು ವಿವಿಧ ನಿವೇಶನಗಳ ಮಾದರಿ ಹಾಗೂ ವಿಸ್ತೀರ್ಣಕ್ಕನುಗುಣವಾಗಿ ಲೆಕ್ಕಾಚಾರ ಮಾಡಿ ನಿವೇಶನದ ಒಟ್ಟು ಮೌಲ್ಯವನ್ನು ನಿರ್ಧರಿಸಲಾಗುವುದು. ಮೂಲೆ ಮತ್ತು ಮುಖ್ಯ ರಸ್ತೆಗಳಿಗೆ ಹೊಂದಿಕೊಂಡಿರುವ ನಿವೇಶನಗಳಿಗೆ ಪ್ರವರ್ಗಕ್ಕೆ ಅನುಗುಣವಾಗಿ ಶೇ. 5 ಮತ್ತು 10 ರಷ್ಟು ಮೊತ್ತವನ್ನು ನಿವೇಶನದ ಮೌಲ್ಯಕ್ಕೆ ಸೇರಿಸಿ ನಿವೇಶನದ ಒಟ್ಟು ಮೌಲ್ಯವನ್ನು ನಿರ್ಧರಿಸಲಾಗುವುದು. **ಮಳಿಗೆಗಳು:** ಹೊಸ ಮಳಿಗೆಯ ಮೌಲ್ಯವನ್ನು ನಿರ್ಧರಿಸುವಾಗ ಮಳಿಗೆ ನಿರ್ಮಾಣ ವೆಚ್ಚಕ್ಕೆ ನಿಗಮದ ಸೇವಾಶುಲ್ಕ ಶೇ. 3ರಿಂದ 22ರವರೆಗೆ ಪ್ರವರ್ಗಗಳಿಗೆ ಅನುಸಾರವಾಗಿ ವಿಧಿಸಿ ಒಟ್ಟು ಮೌಲ್ಯವನ್ನು ನಿರ್ಧರಿಸಲಾಗುವುದು.	sketch. The land Rate per Sq.Mtr. will be fixed pro-rata by calculating the total cost of the land of Saleable Area of the land and the total cost of the plot will be decided by calculating with reference to the type of the plot and dimension of the land. In respect of the plots adjoining to Corner and Main Roads, as per the categorization an amount of 5% and 10% will be added to the cost of the plot and the total cost of the plot will be decided/ arrived at. **For Sheds:** For fixing the cost of the newly constructed shed, service charge of 3% to 22% based on category of the area is levied on actual construction cost.
ಆ)	ಈ ನಿವೇಶನಗಳನ್ನು ಅಥವಾ ಕೈಗಾರಿಕಾ ಶೆಡ್‌ಗಳನ್ನು ನಿರುದ್ಯೋಗಿ ಯುವಕರಿಗೆ ನೀಡುವಾಗ ಎಷ್ಟು ರಿಯಾಯಿತಿ ನೀಡಲಾಗುವುದು;	ಪ್ರಸ್ತುತ ನಿಗಮವು ನಿವೇಶನಗಳನ್ನು ಅಥವಾ ಕೈಗಾರಿಕಾ ಮಳಿಗೆಗಳನ್ನು ನಿರುದ್ಯೋಗಿ ಉದ್ಯಮಶೀಲರಿಗೆ ನೀಡುತ್ತಿರುವ ವಿವಿಧ ರಿಯಾಯಿತಿಗಳು ಈ ಕೆಳಕಂಡಂತಿವೆ; ➢ ಹೊಸ ಕೈಗಾರಿಕಾ ನೀತಿ 2014–19ರ ಅನ್ವಯ ಕೆಎಸ್ಎಸ್ಐಡಿಸಿ ಯಿಂದ ಅಭಿವೃದ್ಧಿಪಡಿಸಿರುವ/	Following are the details of various concessions that are being given to un-employed entrepreneurs at the time of allotment of Industrial sheds or plots. ➢ As per **New Industrial Policy 2014-19**, following reservation is provided while

		ದರಗಳನ್ನು ಅನ್ವಯಿಸಿ ಮಳಿಗೆ ಮೌಲ್ಯವನ್ನು ಲೆಕ್ಕಾಚಾರ ಮಾಡಿ ಅದರಲ್ಲಿ ಸವಕಳಿಯನ್ನು ವಾರ್ಷಿಕ ಶೇ. 3.34 ರಂತೆ ಪರಿಗಣಿಸಿ (ಗರಿಷ್ಟ ಮಿತಿ: ಶೇ.70ರಷ್ಟು) ನಿರ್ಮಾಣವಾದ ವರ್ಷದಿಂದ ಹಂಚಿಕೆಯಾಗುವವರೆಗಿನ ಅವಧಿಗೆ ಒಟ್ಟು ಲೆಕ್ಕಾಚಾರ ಮಾಡಿ ಮಳಿಗೆ ಮೌಲ್ಯದಲ್ಲಿ ಕಳೆದು ಮಳಿಗೆ ಮೌಲ್ಯವನ್ನು ನಿರ್ಧರಿಸಲಾಗುತ್ತದೆ. **<u>ಹೊಸ ಕೈಗಾರಿಕಾ ವಸಾಹತುವಿನಲ್ಲಿ ದರ ನಿರ್ಧರಿಸುವ ಬಗ್ಗೆ:</u>** **<u>ನಿವೇಶನಗಳಿಗೆ:</u>** ಹೊಸ ಕೈಗಾರಿಕಾ ವಸಾಹತುವಿನಲ್ಲಿ ಭೂಮಿ ಸ್ವಾಧೀನ ಪಡಿಸಿಕೊಂಡ ವೆಚ್ಚ, ಅದಕ್ಕೆ ತಗಲುವ ಸ್ಟ್ಯಾಂಪ್ ಡ್ಯೂಟಿ ಮತ್ತು ಸ್ಲಂ ಸೆಸ್, ಇವುಗಳನ್ನು ಆಧರಿಸಿ ಒಟ್ಟು ಮೌಲ್ಯವನ್ನು ನಿರ್ಧರಿಸಲಾಗುವುದು. ಅದಲ್ಲದೇ, ಸದರಿ ಜಮೀನಿಗೆ ಸಿವಿಲ್ ಮತ್ತು ಎಲೆಕ್ಟ್ರಿಕಲ್ ಕಾಮಗಾರಿಗಳ ಅಭಿವೃದ್ಧಿಗಾಗಿ ಮಾಡಿರುವ ವೆಚ್ಚ ಶಾಸನ ಬದ್ಧ ಪಾವತಿಗಳು ಮತ್ತು ನಿಗಮದ ಸೇವಾ ಶುಲ್ಕಗಳನ್ನು ಕೂಡಿಸಿ ಒಟ್ಟು ವೆಚ್ಚ ನಿರ್ಧರಿಸಲಾಗುವುದು. ಜಮೀನಿನ ನಿಗದಿತ ಮೌಲ್ಯ + ಅಭಿವೃದ್ಧಿ ವೆಚ್ಚ = ಒಟ್ಟು ವೆಚ್ಚ. ಮುಂದುವರೆದಂತೆ, ನಿಗಮದ ಮಂಡಳಿ ರೂಪಿಸಿರುವ ನಿಯಮಗಳ ಪ್ರಕಾರ ಸ್ವಾಧೀನ ಪಡಿಸಿಕೊಂಡು ಅಭಿವೃದ್ಧಿಪಡಿಸಿರುವ ಒಟ್ಟು ಜಮೀನಿನ ವಿಸ್ತೀರ್ಣದಲ್ಲಿ, ಶೇ. 65 ರಷ್ಟನ್ನು ಮಾತ್ರ ಸೇಲಬಲ್ ಏರಿಯಾ ಎಂದು ಪರಿಗಣಿಸಲಾಗುವುದು ಹಾಗೂ ಕೆಲವು ಕೈಗಾರಿಕಾ ವಸಾಹತುಗಳಲ್ಲಿ ಮಾರಾಟಕ್ಕೆ ಅನುಕೂಲವಾಗಿರುವ	depreciation at the rate of 3.34% from the year of construction of the shed to the allotment year (with a ceiling limit of 70%). **<u>Fixation of cost of the plot in New Industrial Estates:</u>** **<u>For Plots:</u>** The cost of the plot will be decided by considering the acquisition cost, applicable Stamp Duty and Slum Cess. Apart from this, the total cost will be decided by adding Service Charges of the Corporation and the Statutory payment and cost incurred towards the works for Civil and Electrical Developmental works of the said land. Fixed cost of Land + Development Cost = Total Cost. As per the rules formulated by the Board of the Corporation, out of total extent of land acquired and developed, only 65% will be considered as Saleable Area and in some of the Industrial Estates, the quantum of land that would be advantageous and available for sale (Saleable Area) will be considered as per the extent of land calculated and given by the Engineer as per the

ಎ, ಬಿ, ಸಿ, ಡಿ ಪ್ರವರ್ಗವನ್ನು ಆಧರಿಸಿ ಕೆಳಕಂಡಂತೆ ನಿಗಮದ ಸೇವಾಶುಲ್ಕ ವಿಧಿಸಲಾಗುತ್ತದೆ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತದೆ.

ಕೆಟಗರಿ/ಪ್ರದೇಶ	ಸೇವಾಶುಲ್ಕ	ರಿಯಾಯಿತಿ
ಎ	20%	0
ಬಿ	10%	10%
ಸಿ	5%	20%
ಡಿ	0	30%

(ಕೈಗಾರಿಕಾ ವಸಾಹತುವಿನೊಳಗೆ ಮೂಲೆ ಮತ್ತು ಮುಖ್ಯರಸ್ತೆಗೆ ಇರುವ ನಿವೇಶನಗಳಿಗೆ ಪ್ರವರ್ಗ ಎ & ಬಿ ವಸಾಹತುಗಳಲ್ಲಿ ಕ್ರಮವಾಗಿ 10% & 5% ಸೇವಾ ಶುಲ್ಕವನ್ನು ವಿಧಿಸಲಾಗುವುದು, ಸಿ ಮತ್ತು ಡಿ ಪ್ರವರ್ಗಗಳಿಗೆ ಹೊರತುಪಡಿಸಿ.)

ಇದಲ್ಲದೇ, ಪ್ರಮುಖ ಹೆದ್ದಾರಿಗಳಿಗೆ ಹೊಂದಿಕೊಂಡಂತಿರುವ ಕೈಗಾರಿಕಾ ವಸಾಹತುಗಳ ಜಮೀನಿಗೆ ಶೇ. 5 ರಿಂದ 50ರಷ್ಟು ಮಾರ್ಗಸೂಚಿ ದರಗಳನ್ನು ನಿಗಮದಿಂದ ಹೆಚ್ಚಳ ಮಾಡಲಾಗುತ್ತದೆ.

ಮಳಿಗೆಗಳು:

ಮಳಿಗೆಗಳ ದರವನ್ನು ನಿರ್ಧರಿಸುವಾಗ ಭೂಮಿಯ ದರವನ್ನು ಮೇಲಿನಂತೆ ನಿಗಧಿಗೊಳಿಸಲಾಗುತ್ತದೆ.

ಇನ್ನುಳಿದಂತೆ ಈಗಾಗಲೇ ನಿರ್ಮಿಸಿರುವ ಮಳಿಗೆಯ ಮೌಲ್ಯವನ್ನು ನಿರ್ಧರಿಸುವಾಗ ಹಂಚಿಕೆಯಾಗುವ ಸಾಲಿನ ಎಸ್.ಆರ್

formulated by the Board as per Industrial Policy and the details are as given below:

Category/ Area	Service charge	Rebate
A	20%	0
B	10%	10%
C	5%	20%
D	0	30%

In respect of corner plots and the plots adjacent to Main road located within the industrial estates of category A and B, service charges of 10% and 5% is levied, whereas no service charge is levied for Category C & D.

Besides this, for the industrial estates which are adjacent to main roads, the Corporation levies additional guidance value of 5% to 50%.

For Sheds:

For the industrial sheds, the land rate is fixed as detailed above.

For the shed which has been already constructed, the cost of the shed is fixed by considering the S.R rates of the prevailing year by deducting the

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	12
ಸದಸ್ಯರ ಹೆಸರು	:	ಶ್ರೀ ಪಿ. ರಾಜೀವ್ (ಕುಡಚಿ)
ಉತ್ತರಿಸುವವರು	:	ಮಾನ್ಯ ಸಣ್ಣ ಕೈಗಾರಿಕೆ ಸಚಿವರು
ಉತ್ತರಿಸಬೇಕಾದ ದಿನಾಂಕ	:	09.07.2018.

ಕ್ರ.ಸಂ.	ಪ್ರಶ್ನೆ	ಉತ್ತರ	Answer
ಅ)	ರಾಜ್ಯದಲ್ಲಿ ಸಣ್ಣ ಕೈಗಾರಿಕೆ ಇಲಾಖೆ ವತಿಯಿಂದ ಉದ್ಯಮ ಪ್ರಾರಂಭಿಸಲು ನೀಡಲಾಗುವ ಕೈಗಾರಿಕಾ ಶೆಡ್ ಅಥವಾ ನಿವೇಶನಗಳಿಗೆ ಯಾವ ಆಧಾರದ ಮೇಲೆ ದರ ನಿಗದಿಪಡಿಸಲಾಗುತ್ತಿದೆ;	ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ನಿರ್ದೇಶನಾಲಯದಡಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತವು ರಾಜ್ಯದಾದ್ಯಂತ ಕೈಗಾರಿಕಾ ವಸಾಹತುಗಳನ್ನು ಅಭಿವೃದ್ಧಿಪಡಿಸಿ ವಿವಿಧ ಮಾದರಿ ಮಳಿಗೆಗಳನ್ನು ನಿರ್ಮಿಸಿ ಮತ್ತು ನಿವೇಶನಗಳನ್ನು ಅಭಿವೃದ್ಧಿಪಡಿಸಿ ಕೈಗಾರಿಕಾ ಘಟಕಗಳಿಗೆ ಹಂಚಿಕೆ ಮಾಡುತ್ತಿದೆ. ಸದರಿ ಮಳಿಗೆಗಳ/ ನಿವೇಶನಗಳ ಮೌಲ್ಯವನ್ನು ನಿರ್ಧರಿಸುವ ಬಗ್ಗೆ ಮಾನದಂಡ / ಮಾರ್ಗಸೂಚಿಗಳನ್ನು ರೂಪಿಸಿರುತ್ತದೆ. ಇದನ್ನು ಆಧರಿಸಿ ಕೆಳಕಂಡಂತೆ ನಿವೇಶನ/ಮಳಿಗೆಯ ಮೌಲ್ಯವನ್ನು ನಿರ್ಧರಿಸಲಾಗುತ್ತದೆ. **<u>ಹಾಲಿ ಕೈಗಾರಿಕಾ ವಸಾಹತುವಿನಲ್ಲಿ ದರ ನಿರ್ಧರಿಸುವ ಬಗ್ಗೆ:</u>** **<u>ನಿವೇಶನಗಳಿಗೆ:</u>** ಹಾಲಿ ಕೈಗಾರಿಕಾ ವಸಾಹತುವಿನಲ್ಲಿ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿ ದರದ (Guidance Value) ಮೇಲೆ ನಿಗಮವು ಕೈಗಾರಿಕಾ ನೀತಿಯಂತೆ ವಿಂಗಡಣೆ ಮಾಡಿರುವ	Karnataka State Small Industries Development Corporation Limited is functioning under the administrative control of MSME Directorate and is establishing the Industrial Estates at various places of the State and Constructing/ Developing various types of Sheds/Plots and allotting the same to the micro and small industries. The cost of the plot/ shed is being fixed as per the criteria/ guidelines/ decisions as formulated by the Board. **<u>Fixation of Cost of the plots in the Existing Industrial Estates:</u>** **<u>For Industrial plots:</u>** In case of existing Industrial Estates, the cost of the plots will be calculated in accordance with the prevailing Guidance Value issued by the Government, on which the Corporation has fixed a Service charge and also rebate in accordance with classification of the area viz., A, B, C, D as

ಕರ್ನಾಟಕ ವಿಧಾನಸಭೆ

1)	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	53
2)	ಮಾನ್ಯ ಸದಸ್ಯರ ಹೆಸರು	ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
3)	ಉತ್ತರಿಸಬೇಕಾದ ದಿನಾಂಕ	09/07/2018
4)	ಉತ್ತರಿಸುವವರು	ಮಾನ್ಯ ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ	
ಅ)	ವಿಜಯಪುರ ಜಿಲ್ಲೆಯ ಇಂಡಿ ಪಟ್ಟಣದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಸ್ವಂತ ಕಟ್ಟಡ ಮತ್ತು ಮೂಲಭೂತ ಸೌಕರ್ಯಗಳು ಇಲ್ಲದಿರುವುದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೀವ್ರ ಅಡಚಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :	ಹೌದು	Yes
ಆ)	ಸದರಿ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಸರ್ಕಾರ ಅನುದಾನದೊಂದಿಗೆ ಮಂಜೂರಾತಿ ನೀಡಿರುವುದು ನಿಜವೇ: ಮಂಜೂರಾದ ಅನುದಾನ ಎಷ್ಟು (ವಿವರ ಒದಗಿಸುವುದು)	ಹೌದು, ವಿಜಯಪುರ ಜಿಲ್ಲೆಯ ಇಂಡಿ ಪಟ್ಟಣದಲ್ಲಿ 2014-15ನೇ ಸಾಲಿನಲ್ಲಿ ಇಂಡಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯು ಪ್ರಾರಂಭಗೊಂಡಿದ್ದು, ಸದರಿ ಸಂಸ್ಥೆಯಲ್ಲಿ ವಿದ್ಯುತ್‌ಕರ್ಮಿ 2 ಘಟಕ ಮತ್ತು ಜೋಡಣೆ ವೃತ್ತಿಯ 2 ಘಟಕಗಳು ಅನುಷ್ಠಾನಗೊಂಡಿರುತ್ತದೆ. ಪ್ರಸ್ತುತ ಸಂಸ್ಥೆಯು DGT ನಿಯಮನುಸಾರ ಮೂಲಭೂತ ಸೌಕರ್ಯಗಳನ್ನು ಹೊಂದಿದ ಖಾಸಗಿ ಮಾಲೀಕತ್ವದ ಕಟ್ಟಡಕ್ಕೆ ಮಾಹೆಯಾನ ಬಾಡಿಗೆ ರೂ.35,056/-ಗಳನ್ನು ಪಾವತಿಸಿ ತರಬೇತಿಗೆ ತೊಂದರೆಯಾಗದಂತೆ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುತ್ತಿದೆ. ಸದರಿ ಸಂಸ್ಥೆಗೆ ನಬಾರ್ಡ್ ಆರ್.ಐ.ಡಿ.ಎಫ್-22ರಲ್ಲಿ ಮಂಜೂರಾತಿ ನೀಡಲಾಗಿದೆ. ರೂ.1.40ಕೋಟಿಗಳು ಮಂಜೂರಾಗಿದ್ದು, ಈಗಾಗಲೇ ರೂ70.00ಲಕ್ಷಗಳನ್ನು ಕರ್ನಾಟಕ ಗೃಹ ಮಂಡಳಿಗೆ ಕಟ್ಟಡ ಕಾಮಗಾರಿ ಕೈಗೊಳ್ಳಲು ಬಿಡುಗಡೆ ಮಾಡಲಾಗಿರುತ್ತದೆ.	Yes, The Govt Industrial training institute has been started at Indi in Vijayapura district in the year 2014-15. Two trades Electrician (2 Units) and Fitter (2 Units) have been implemented in the institute. At present the institute is functioning in a private rented building at a monthly rent of Rs.35,056/- having all the infrastructure required under DGT norms, Thus it is ensured that training is not hampered. The steps have been taken to construct own building for the Institute and sanction has been accorded under NABARD-RIDF-22 scheme at the cost of 1.40 crore, Rs.70.00Lakh has been already released to Karnataka Housing Board under the scheme for building construction.

